



ಮೈಲಾರಪ್ಪ ಬೂದಿಹಾಳ
ಕಲೆ: ಸಂತೋಷ್ ಸಸಿಹಿತ್ಲು





# ಪುಟ್ಟನ ಹುಟ್ದಬ್ಬ

ಹುಟ್ಟು ಹಬ್ಬ ದಿನದಿ ಪುಟ್ಟ
ನೆಟ್ಟನೊಂದು ಸಸಿಯನ್ನು ।
ಮುದ್ದು ಮಾಡಿ ಅನುದಿನ
ಕೊಟ್ಟ ಗೊಬ್ಬ್ರ ನೀರನು ।

ನೆಲದ ಹದದಿ ಬೇರು ಚಾಚಿ
ತಬ್ಬಿ ಹಿಡಿಯಿತು ಮಣ್ಣು
ಚಿನ್ನದೆಲೆಯ ಚಿಗುರು ಹೊತ್ತು
ತೆರೆಯಿತು ಸಸಿ ಕಣ್ಣು ।



ರೆಂಬೆಕೊಂಬೆ ಹತ್ತು ಹಲವು
ಕಳೆದು ವರ್ಷ ಉರುಳಲು ।
ಹೂ ಹಣ್ಣು ಮರದ ತುಂಬ
ತಿನ್ನಲೆಷ್ಟು ಸೊಗಸದು ।

ಹಲವು ಪ್ರಾಣಿ ಪಕ್ಷಿಗಳಿಗೆ
ಒಂದೇ ತಾಯಿ ತೊಟ್ಟಿಲು ।
ಹಾಲು ಕೊಟ್ಟು ಉಣಿಸುವಂತೆ
ಅಮ್ಮ ಕೊಡುವ ಪ್ರೀತಿಯಂತೆ ।

ಮರಳಿ ಬಂತು ಹುಟ್ಟುಹಬ್ಬ
ಪುಟ್ಟನೆದೆಯಲಿ ಹರುಷ ।
ಹರಸಿದವು ಜೀವ ಸಂಕುಲ
ಪುಟ್ಟ ಬಾಳಲಿ ನೂರು ವರುಷ ।